( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ12/07/2024**
**ಅಸಲು ದಾವೆ.ನಂ. 82/2019**
**ಪಿ.ಡಬ್ಲ್ಯೂ1**

( ಪಾಟೀ ಸವಾಲುಃ ಶ್ರೀ.ಎಸ್.ಆರ್.ಸಿ. ವಕೀಲರಿಂದ ಪ್ರತಿವಾದಿಗಳ ಪರವಾಗಿ )

ನನ್ನ ಪತ್ನಿಯ ಹೆಸರು ನಿಂಗಾಜಮ್ಮ, ಅವರು ಊರಿನಲ್ಲಿ ಇದ್ದಾರೆ. ಅವರ ಆರೋಗ್ಯದಿಂದ ಇಲ್ಲ, ಅವರ ಕಣ್ಣಿಗೆ ಸಂಬಂಧಪಟ್ಟಂತೆ ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ಅವರು ಚೆನ್ನಾಗಿ ಮಾತನಾಡುತ್ತಾರೆ. ವಾದಿಗೆ ಆರೋಗ್ಯ ಸರಿ ಇಲ್ಲ ಎನ್ನುವುದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ನಮ್ಮ ಊರಿನಲ್ಲಿ ಒಂದು 7 ಎಕರೆ 5 ಗುಂಟ ವಿಸ್ತೀರ್ಣದ ಕೆರೆ ಇದೆ ಎಂದರೆ ಸರಿ. ಸದರಿ ಕೆರೆ ಇರುವ ಜಾಗದಸರ್ವೆ ನಂಃ73 ಎಂದರೆ ಸರಿ. ನಾನು ದಾವೆ ಹಾಕಿರುವ ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಇರುವ ಕೆರೆಯೇ ಸದರಿ 7 ಎಕರೆ 5 ಗುಂಟೆ ವಿಸ್ತೀರ್ಣದ ಕೆರೆ ಎಂದರೆ ಸರಿ.

ಅತ್ನಿ ಗ್ರಾಮದ ಒಳಗಡೆ ನಮ್ಮ ಸ್ವಂತ ಮನೆ ಇರುತ್ತದೆ. ಪ್ರಸ್ತುತ ನಾವು ಸದರಿ ಮನೆಯಲ್ಲಿಯೇ ವಾಸವಾಗಿದ್ದೇವೆ. ನಾನು ದಾವೆ ಹಾಕಿರುವ ಖಾತಾ ನಂಃ 134 ಕ್ಕೆ ಸಂಬಂಧಪಟ್ಟಂತೆ ಪಂಚಾಯಿತಿ ದಾಖಲೆಗಳಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದು, ಅದನ್ನು ನಾಶಪಡಿಸಿರಬಹುದು ಎಂದು ನುಡಿಯುತ್ತಾರೆ. ಖಾತಾ ನಂಃ 134 ಇಲ್ಲ ಎಂಬುದಾಗಿ ನಿಮಗೆ ಹಿಂಬರಹವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ನನಗೆ ಹಿಂಬರಹವನ್ನು ಕೊಟ್ಟಿರುತ್ತಾರೆ ಅದರೆ ಪಂಚಾಯಿತಿಯವರು ಹೇಳುತ್ತಿರುವುದು ಸುಳ್ಳು.

ನಾನು ಸದರಿ ಜಾಗವನ್ನು ನನಗೆ ಮಂಜೂರು ಮಾಡಿ,ಇ-ಸ್ವತ್ತನ್ನು ಕೊಡಿ ಎಂದು ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟಿದ್ದೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ಸ.ನಂಃ 73 ಕ್ಕೆ ಸೇರಿದ ಕೆರೆಯ ಜಾಗ ಆದ್ದರಿಂದ ಇ-ಸ್ವತ್ತು ಕೊಡಲು ಬರುವುದಿಲ್ಲ ಎಂಬುದಾಗಿ ಹಿಂಬರಹವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿರುತ್ತಾರೆ ಅದರೆ ಅದು ಸುಳ್ಳು ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟೀ ಸವಾಲು ಸಮಯಾವಕಾಶವನ್ನು ಕೇಳಿದ್ದರಿಂದ ಮುಂದೂಡಲಾಯಿತು. )

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**